ಓ ಎಸ ನಂ.95/2023
ಪಿ.ಡಬ್ಲ್ಯೂ-1 ಮಲ್ಕಪ್ಪ ತಂದೆ ಶರಣಪ್ಪ

**(ಇಂದು ದಿನಾಂಕಃ 18-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ 4ನೇ ಪ್ರತಿವಾದಿ ಪರ ಶ್ರೀ ಎಸ್ ಜಿ ಹೆಚ್ ವಕೀಲರಿಂದ.

ಈ ದಾವೆ ಹಾಕಲು ವಕೀಲರಿಗೆ ಯಾರು ಮಾಹಿತಿ ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವೆಯಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತು. ನಾವು ಸರ್ವೆ ನಂ.116 ರಲ್ಲಿ ಒಮ್ಮೆ 4 ಎಕರೆ 1 ಗುಂಟೆ ಮತ್ತು 1 ಎಕರೆ 30 ಗುಂಟೆ ಜಮೀನು ಖರೀದಿಸಿರುತ್ತೇವೆ. ಆ ರೀತಿ ಖರೀದಿಸಿದ ಬಗ್ಗೆ ತೋರಿಸಲು ಖರೀದಿ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. 12 ಎಕರೆ 31 ಗುಂಟೆ ಜಮೀನು ನನಗೆ ಸೇರಿರುತ್ತದೆ ಎಂದು ನನ್ನ ದಾವೆಯಲ್ಲಿ ಬರೆಸಿರುವುದಿಲ್ಲ. ನಾನು ಖರೀದಿ ಮಾಡಿದ ದಾವಾ ಜಮೀನಿಗೆ ಈಗ ಇರುವ ನಿಖರವಾದ ಹಿಸ್ಸಾ ನಂಬರ ಹೇಳಲು ನನಗೆ ಬರುವುದಿಲ್ಲ.

2. ನಾನು ಖರೀದಿಸಿದ 4 ಎಕರೆ 1 ಗುಂಟೆ ಜಮೀನಿನ ಪೂರ್ವಕ್ಕೆ ಚಂದ್ರಶಾ ತಂದೆ ಜಗಪ್ಪರವರ ಜಮೀನು ಇರುತ್ತದೆ. 4 ಎಕರೆ 1 ಗುಂಟೆ ಜಮೀನು ಖರೀದಿಸಿದ 4 ವರ್ಷದ ನಂತರ ನಾನು 1 ಎಕರೆ 30 ಗುಂಟೆ ಜಮೀನು ಖರೀದಿಸಿರುತ್ತೇನೆ. ನನ್ನ ಮೊದಲಿನ ಖರೀದಿ ಪತ್ರದಲ್ಲಿ 1 ಎಕರೆ 30 ಗುಂಟೆ ಜಮೀನು ಕೂಡಾ ಖರೀದಿಸಿದ ಕುರಿತು ನಮೂದು ಇರುವುದಿಲ್ಲ. 1 ಎಕರೆ 30 ಗುಂಟೆ ಜಮೀನು ಖರೀದಿಸಿದ ಬಗ್ಗೆ ತೋರಿಸಲು ಕ್ರಯಪತ್ರವನ್ನು ಹಾಜರುಪಡಿಸಿರುತ್ತೇನೆ. ನಾನು ಆ ರೀತಿ ಯಾವುದೇ ಖರೀದಿ ಪತ್ರ ಹಾಜರುಪಡಿಸದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬಸಣ್ಣ ತಂದೆ ವಿಠೋಬಾರವರಿಂದ 2 ಜಮೀನುಗಳನ್ನು ಖರೀದಿಸಿರುತ್ತೇನೆ.

3. 4 ಎಕರೆ 1 ಗುಂಟೆ ಜಮೀನಿನ ಚೆಕ್ಕುಬಂದಿ ಗೊತ್ತು. ಪೂರ್ವಕ್ಕೆ ಚಂದ್ರಶಾ ತಂದೆ ಜಗನ್ನಾಥರವರ ಜಮೀನು, ಪಶ್ಚಿಮಕ್ಕೆ ಕುಲಕರ್ಣಿರವರ ಜಮೀನು, ಉತ್ತರಕ್ಕೆ ಹೊನ್ನಪ್ಪರವರ ಜಮೀನು ಮತ್ತು ದಕ್ಷಿಣಕ್ಕೆ ಬಸಣ್ಣ ತಂದೆ ವಿಠೋಬಾರವರ ಜಮೀನು ಇರುತ್ತದೆ. 1 ಎಕರೆ 31 ಗುಂಟೆ ಜಮೀನಿನ ಚೆಕ್ಕುಬಂದಿ ಅದೇ ರೀತಿ ಇರುತ್ತದೆ ಅದು 4 ಎಕರೆ ಜಮೀನಿಗೆ ಹತ್ತಿಕೊಂಡು ಇರುತ್ತದೆ. 1 ಎಕರೆ 31 ಗುಂಟೆ ಜಮೀನಿನ ದಕ್ಷಿಣ ದಿಕ್ಕಿಗೆ 4 ಎಕರೆ 1 ಗುಂಟೆ ಜಮೀನು ಇರುತ್ತದೆ. 1 ನೇ ಪ್ರತಿವಾದಿ ಶಿವಲಿಂಗಪ್ಪ ನನ್ನ ಸಹೋದರನಾಗಿರುತ್ತಾನೆ. ನಾನು ಮತ್ತು ನನ್ನ ಸಹೋದರ ಶಿವಲಿಂಗಪ್ಪರವರು ಶಿವಲಿಂಗಪ್ಪ ಜೀವಿತಾ ಇರುವಾಗಲೇ ಬೇರೆಯಾಗಿರುತ್ತೇವೆ. ನಾವು ಬೇರೆಯಾದಾಗ ನಮಗೆ ತಲಾ 2 ಎಕರೆ 35 ಗುಂಟೆ ಜಮೀನು ಬಂದಿರುತ್ತದೆ.

4. ನಾವು ಜಮೀನು ತೆಗೆದುಕೊಂಡು 30 ವರ್ಷಗಳಾಗಿರುತ್ತದೆ ಮತ್ತು ಬೇರೆಯಾಗಿ 20 ವರ್ಷಗಳಾಗಿರುತ್ತವೆ. ನಾವು ಬೇರೆಯಾದಂತೆ ನಮ್ಮ ನಮ್ಮ ಆಸ್ತಿಗಳು ನಮ್ಮ ನಮ್ಮ ಸ್ವಾಧೀನದಲ್ಲಿ ಇರುತ್ತವೆ. ನಾನು ಈ ದಾವೆಯನ್ನು ಪಾಲಿಗಾಗಿ ಹಾಕಿಲ್ಲ. ಸಾಕ್ಷಿ ಹಣ ಹಂಚಿಕೆ ಆಗಬೇಕು ಎಂದು ಹಾಕಿರುತ್ತೇನೆ ಎನ್ನುತ್ತಾರೆ. ನನ್ನ ಜಮೀನಿನ ಹಣ ನನಗೆ ಬೇಕು ಎಂದು ದಾವೆ ಹಾಕಿರುತ್ತೇನೆ, ಅದು ಎಷ್ಟು ಹಣ ಎಂದು ನನಗೆ ಹೇಳಲು ಆಗುವುದಿಲ್ಲ. ನನ್ನ ಅಣ್ಣನ ಮಕ್ಕಳು ನನಗೆ ಹಣ ನೀಡುವುದಿಲ್ಲ ಎಂದು ಹೇಳಿದ್ದರಿಂದ ನಾನು ದಾವೆ ಹಾಕಿರುತ್ತೇನೆ. ನನಗೆ 2 ಎಕರೆ 35 ಗುಂಟೆ ಜಮೀನಿನ ಪರಿಹಾರದ ಹಣ ಬರಬೇಕು. ಬಸಣ್ಣರವರಿಗೆ 3 ಜನ ಗಂಡು ಮಕ್ಕಳು ಇರುತ್ತಾರೆ. ದಾವೆ ಸಲ್ಲಿಸುವ ಮುಂಚೆ 3 ಜನ ಗಂಡು ಮಕ್ಕಳು ಬಸಣ್ಣರವರಿಗೆ ಇದ್ದ ಕುರಿತು ನನಗೆ ಗೊತ್ತಿತ್ತು. ಅವರನ್ನುದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇವೆ.

5. ಬಸಣ್ಣರವರ ಮಕ್ಕಳ ಹೆಸರು ಲಕ್ಷ್ಮೀಕಾಂತ, ಸಿದ್ದಪ್ಪ ಮತ್ತು ಇನ್ನೊಬ್ಬರ ಹೆಸರು ನನಗೆ ಈಗ ನೆನಪು ಬರುತ್ತಿಲ್ಲ. 2ನೇ ಪ್ರತಿವಾದಿ ಚಂದ್ರಶಾ ತಂದೆ ಜಗನ್ನಾಥರಾವ್ ಈಗ ಜೀವಿತಾ ಇರುವುದಿಲ್ಲ, ಅವರು ಮೃತರಾಗಿರುತ್ತಾರೆ. ದಾವೆ ಹಾಕುವ ಮೊದಲು ಚಂದ್ರಶಾ ಮೃತರಾದ ವಿಚಾರ ನನಗೆ ಗೊತ್ತಿತ್ತು. ಚಂದ್ರಶಾರವರಿಗೆ 3 ಜನ ಗಂಡು ಮಕ್ಕಳು ಇರುತ್ತಾರೆ. ಅವರ ಹೆಸರು ನನಗೆ ಗೊತ್ತಿಲ್ಲ. 4ನೇ ಪ್ರತಿವಾದಿಯ ವಾರಸುದಾರರಾದ ರುಕ್ಮೀಣಿ, ಜಗದೇವಿ ಮತ್ತು ಮಹಾನಂದರವರು ತಕರಾರು ಮಾಡಿದ್ದರಿಂದ ಅವರನ್ನು ಈ ದಾವೆಯಲ್ಲಿ ಸೇರಿಸಿರುತ್ತೇನೆ. ಅವರ ಸಹೋದರರಾದ ಲಕ್ಷ್ಮೀಕಾಂತ, ಸಿದ್ದಪ್ಪ ಮತ್ತು ಇನ್ನೊಬ್ಬರು ಕೂಡಾ ತಕರಾರು ಮಾಡಿರುತ್ತಾರೆ. ನಾನು 4ನೇ ಪ್ರತಿವಾದಿಯ ವಾರಸುದಾರರ ವಿರುದ್ದ ಯಾವುದೇ ವ್ಯಾಜ್ಯ ಕಾರಣವಿಲ್ಲದೆ ಒಂದು ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ *2* ಮತ್ತು *3*ನೇ ಪ್ರತಿವಾದಿಗಳ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.